**<u>ದಿನಾಂಕಃ 29.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ಪ್ರತಿವಾದಿ 1 ರಿಂದ 3 ರವರ ಪರ ಶ್ರೀ. ಹೆಚ್ ಆರ್ ವಕೀಲರಿಂದಃ-</u>

ನಾನು ಓದು ಬರಹ ಕಲಿತಿಲ್ಲ. ವಾದಿಯವರು ಮತ್ತು ಪ್ರತಿವಾದಿಯರು ನನ್ನ ದೊಡ್ಡಪ್ಪನ ಮೊಮ್ಮಕ್ಕಳು. ನನ್ನ ದೊಡ್ಡಪ್ಪನ ಹೆಸರು ಸಿದ್ದೇಗೌಡ. ನನ್ನ ದೊಡ್ಡಪ್ಪನಿಗೆ ಒಟ್ಟು 1 ಎಕರೆ ಜಮೀನು ಇತ್ತು. ಎ.ವಿ. ಹಳ್ಳಿ ಗ್ರಾಮದಲ್ಲಿ ನನ್ನ ದೊಡ್ಡಪ್ಪನಿಗೆ ವಾಸದ ಮನೆ ಇರಲಿಲ್ಲವಾ ಎಂದರೆ ಸಾಕ್ಷಿ ಬೇರೆಯವರ ಮನೆಯಲ್ಲಿ ಇದ್ದರು ಎನ್ನುತ್ತಾರೆ. ನನ್ನ ತಂದೆಗೆ 1 ಎಕರೆ ಜಮೀನು ಇತ್ತು. ನನ್ನ ತಂದೆ ಮತ್ತು ದೊಡ್ಡಪ್ಪ ವಿಭಾಗ ಮಾಡಿಕೊಂಡ ಬಗ್ಗೆ ದಾಖಲೆ ಇದೆಯಾ ಅವರು ಸುಮಾರು ವರ್ಷಗಳ ಹಿಂದೆಯೇ ಭಾಗ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿಯ ಸರ್ವೆ ನಂ.315/6 ವಿಸ್ತೀರ್ಣ 1 ಎಕರೆ 1 ಗುಂಟೆ.

ದಾವಾ ಆಸ್ತಿಯು ನನ್ನ ದೊಡ್ಡಪ್ಪನಿಗೆ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ತಾವು ಏನು ದಾಖಲೆ ನೋಡಿದ್ದೀರಾ ಎಂದರೆ ಸಾಕ್ಷಿಯು ನನ್ನ ದೊಡ್ಡಪ್ಪನೇ ಖರೀದಿ ಮಾಡಿದ ಆಸ್ತಿ ಎನ್ನುತ್ತಾರೆ. ಯಾರಿಂದ ಯಾವಾಗ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ನನ್ನ ದೊಡ್ಡಪ್ಪನ ಹೆಸರಿಗೆ ಖಾತೆ ಆಗಿರುವ ಬಗ್ಗೆ ನಾನು ದಾಖಲೆ ನೋಡಿಲ್ಲ. ದಾವಾ ಆಸ್ತಿಯು ಯಾರ ಹೆಸರಿಗೆ ಖಾತೆ ಇದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಶ್ರೀನಿವಾಸ್ ಹೆಸರಿಗೆ ಇದೆ ಎನ್ನುತ್ತಾರೆ. ಏನು ದಾಖಲೆ ನೋಡಿದ್ದೀರಾ ಎಂದರೆ ಸಾಕ್ಷಿಯು ಶ್ರೀನಿವಾಸ್ ರವರು ನನಗೆ ಹೇಳಿರುತ್ತಾರೆ ಎನ್ನುತ್ತಾರೆ. ನನ್ನ ದೊಡ್ಡಪ್ಪನಿಗೆ ಶ್ರೀನಿವಾಸ ಎಂಬ ಹೆಸರಿನ ಒಬ್ಬನೇ ಮಗ. ವಾದಿಯರು ಎ ವಿ ಹಳ್ಳಿಯಲ್ಲಿ ವಾಸ ಇದ್ದಾರೆ. ಸದರಿಯವರು ಯಾರ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸಾಕ್ಷಿಯು ಯಾರದೋ ಚಿಕ್ಕ ಮನೆಯಲ್ಲಿ ವಾಸ ಇರುತ್ತಾರೆ. ಪ್ರತಿವಾದಿ 1 ರಿಂದ 3 ರವರು ಬೆಂಗಳೂರಿನಲ್ಲಿ ವಾಸ

ಇರುತ್ತಾರೆ. 3ನೇ ಪ್ರತಿವಾದಿಯ ಗಂಡ ಬೆಂಗಳೂರಿನ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ಪ್ರತಿವಾದಿ 1 ರಿಂದ 3 ಸುಮಾರು 15 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಇರುತ್ತಾರೆ. 3 ನೇ ಪ್ರತಿವಾದಿಯ ಗಂಡ ಸತ್ತ ನಂತರ ಆತನ ಕಾರ್ಯಗಳನ್ನು ಸಾಕ್ಷಿಯು 1 ಮತ್ತು 4 ನೇ ವಾದಿಯರು ಎನ್ನುತ್ತಾರೆ.

ದಾವಾ ಆಸ್ತಿಯು ವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಯ ಗಂಡ ಖರೀದಿ ಮಾಡಿ, ಆತನ ಮತ್ತು ಆತನ ತಾಯಿ 4 ನೇ ಪ್ರತಿವಾದಿ ಲಿಂಗಮ್ಮ ರವರ ಹೆಸರಿಗೆ ಜಂಟಿ ಖರೀದಿ ಪತ್ರ ಮಾಡಿಸಿದ್ದರು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಗಂಡ ಮತ್ತು ಆತನ ತಾಯಿ ಲಿಂಗಮ್ಮರವರ ಹೆಸರಿಗೆ ಜಂಟಿ ಕ್ರಯಪತ್ರ ಮಾಡಿಕೊಂಡ ಜಮೀನಿನ ಪೈಕಿ 1 ಎಕರೆ 1 ಗುಂಟೆ ಜಮೀನನ್ನು ಮರೀಗೌಡನ ಹೆಂಡತಿ ಕಮಲಮ್ಮನವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಇನ್ನುಳಿಕೆ 1 ಎಕರೆ 1 ಗುಂಟೆ ಜಮೀನನ್ನು 3 ನೇ ಪ್ರತಿವಾದಿಯ ಗಂಡ ಬದುಕಿದ್ದ ಕಾಲದಲ್ಲಿ ಚಿಕ್ಕಪುಟ್ಟೇಗೌಡರ ಮಗ ಪುಟ್ಟಸ್ವಾಮಿರವರ ಹೆಸರಿಗೆ ರೂ. 50 ಸಾವಿರಕ್ಕೆ 6 ವರ್ಷಕ್ಕೆ ಬೋಗ್ಯ ಮಾಡಿದ್ದರು ಎಂದರೆ ಸರಿ. ಸದರಿ ಬೋಗ್ಯದ ಹಣವನ್ನು ಪ್ರತಿವಾದಿ 1 ರಿಂದ 3 ರವರು ಪುಟ್ಟಸ್ವಾಮಿರವರಿಗೆ ಹಿಂತಿರುಗಿಸಿ ಬೋಗ್ಯ ಖುಲಾಷೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಶ್ರೀನಿವಾಸರವರು ಬದುಕಿದ್ದ ವೇಳೆಯಲ್ಲಿ ಆತನ ಮಗ 1 ನೇ ಪ್ರತಿವಾದಿಯ ಹೆಸರಿಗ ಖಾತೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ 1 ರಿಂದ 3 ರವರೇ ಸ್ವಾ ಧೀನ ಇದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ದಿಃ 07.10.2011 ರಂದು ಪದ್ಮ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳು ಎಂದಿಗೂ ಸ್ವಾ ಧೀನ ಇರಲಿಲ್ಲ ಮತ್ತು ಅವರು ಪ್ರತಿವಾದಿ 1 ರಿಂದ 4 ರವರ ಜೊತೆ ಒಟುಟ

ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಪಂಚಾಯಿತಿಯಲ್ಲಿ ನಾನು ಸಹ ಸೇರಿದ್ದೆ ಎಂದು ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಎ ವಿ ಹಳ್ಳಿ ಗ್ರಾಮದಲ್ಲಿ ವಾಸ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಅವರ ಜೊತೆ ಸೇರಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ